ನಾಗಿದ್ದ. ಜಾತಿ, ಮತ, ದೇವರು, ಶ್ರೀಮಂತಿಕೆ ಧಿಕ್ಕರಿಸಿ 'ವಾಮಪಂಥ' ಹಿಡಿದಿದ್ದ. ಹೈದರಾಬಾದಿನ ಒಂದು ಕಾರ್ಖಾನೆಯ ಕಾರ್ಮಿಕರು ಮುಷ್ಕರ ಹೂಡಿದ್ದರು. ಚಂದ್ರ ತನ್ನ ಕೆಲವು ಗೆಳೆಯರೊಂದಿಗೆ ಕಾರ್ಮಿಕರನ್ನು ಬೆಂಬಲಿಸಿ, ಅವರ ಪ್ರದರ್ಶನ ಮೆರವಣಿಗೆಗಳ ಮುಂಚೂಣಿಯಲ್ಲಿದ್ದು ಭಾಗವಹಿಸಿದ. ದೊಂಬಿ, ಕಾರ್ಖಾನೆಯ ಒಂದು ಭಾಗಕ್ಕೆ ಬೆಂಕಿ, ಲಾಠಿಚಾರ್ಜ್, ಗೋಳಿಬಾರ್, ಕೆಲವು ಹೆಣ ಬಿದ್ದವು. ಪೊಲೀಸರು ಚಂದ್ರನನ್ನೂ ಬಂಧಿಸಿ ಜೈಲಲಿಟ್ಟರು. ಜಗ್ಗಯ್ಯ ಮತ್ತು ಆತನ ಅಳಿಯ ತಮ್ಮ ಹಣ ಮತ್ತು ಪ್ರಭಾವವನ್ನೆಲ್ಲ ಉಪಯೋಗಿಸಿ ಚಂದ್ರನನ್ನು ಬಿಡುಗಡೆ ಮಾಡಿಸಿ, ಅವನ ಬಗ್ಗೆ ಪೊಲೀಸ್ ಫೈಲುಗಳಲ್ಲಿದ್ದ ಮಾಹಿತಿ, ದಾಖಲೆಗಳನ್ನೆಲ್ಲ ಅಳಿಸಿ ಹಾಕಿಸಿದರು. ಓದು ಬಿಡಿಸಿ, ಸ್ಟೇಟ್ ಬ್ಯಾಂಕಿನಲ್ಲೊಂದು ನೌಕರಿ ಕೊಡಿಸಿ, ದೂರದ ಬೆಂಗಳೂರಿಗೆ ರವಾನಿಸಿದರು.

ಚಂದ್ರ ಬೆಂಗಳೂರಿಗೆ ಬಂದು ಈಗ್ಗೆ ನಾಲ್ಕು ವರ್ಷಗಳಾಗಿತ್ತು. ತಾನು ಬಾಡಿಗೆಗೆ ಹಿಡಿದಿದ್ದ ಮನೆಯಲ್ಲಿ ಸಹವಾಸಿಗಳಾಗಿ ಕನ್ನಡದ ಹುಡುಗರನ್ನೇ ಇಟ್ಟುಕೊಳ್ಳುತ್ತಿದ್ದ. ಹೆಚ್ಚಾಗಿ ಕನ್ನಡದವರೊಂದಿಗೆ ಬೆರೆತು, ಕನ್ನಡದಲ್ಲೇ ವ್ಯವಹರಿಸಿ, ಕನ್ನಡದ ಪುಸ್ತಕಗಳನ್ನೇ ಓದಿ. ಈಗ ಕನ್ನಡದವರಷ್ಟೇ ಚೆನ್ನಾಗಿ ಕನ್ನಡ ಮಾತಾಡಲು, ಓದಲು ಬರೆಯಲು ಕಲಿತಿದ್ದ.

ಚಂದ್ರನ 'ಕನ್ನಡಪ್ರೇಮ'ಕ್ಕೆ ಮತ್ತೊಂದು ಪ್ರಬಲ ಕಾರಣವೂ ಇತ್ತು – ಅದು ಪಕ್ಕದ ಮನೆ ತರುಣಿಯೊಂದಿಗೆ ಅವನ ಪ್ರೇಮಪ್ರಕರಣ. ಬ್ರಾಹ್ಮಣ ಹುಡುಗಿ, ಹೆಸರು ಜಾನಕಿ, ನಾನೂ ಕೆಲವು ಸಲ ನೋಡಿದ್ದೇನೆ. ಲಕ್ಷಣವಾಗಿದ್ದಾಳೆ. ಮಿತಭಾಷಿ, ಗಂಭೀರೆ, ವಿದ್ಯಾವಂತೆ, ಮಿಗಿಲಾಗಿ ಧೈರ್ಯವಂತೆ. ರಾಜ್ಯದ ವಿದ್ಯುತ್ ಇಲಾಖೆಯಲ್ಲಿ ಕೆಲಸ. ಚಂದ್ರ ಅವಳನ್ನು ತುಂಬಾ ಪ್ರೀತಿಸುತ್ತಿದ್ದ. ಅವಳೂ ತನ್ನನ್ನು ಗಾಢವಾಗಿ ಪ್ರೀತಿಸುತ್ತಾಳೆ ಎಂದು ಹಲವಾರು ಸಾಕ್ಷಿ ಪುರಾವೆಗಳೊಂದಿಗೆ ನನ್ನನ್ನು ನಂಬಿಸಿದ್ದ.

★★★

ಒಮ್ಮೆ ನನ್ನ ಕೃತಿಗಳ ಬಗ್ಗೆ ಚರ್ಚಿಸುತ್ತಾ ಚಂದ್ರ ಕೇಳಿದ, 'ನಿಮ್ಮ ಕವನ, ಕಥೆ, ಕಾದಂಬರಿಗಳಲ್ಲಿ ಹೆಚ್ಚಾಗಿ ಮಧ್ಯಮವರ್ಗದ ಬಗ್ಗೆ ಮಾತ್ರ ಬರೀತೀರಲ್ಲ, ದಲಿತರ ಬಗ್ಗೆ, ರೈತರ ಕಾರ್ಮಿಕರ ಬಗ್ಗೆ ನೀವೇಕೆ ಬರೆಯೊಲ್ಲ?' ನಾ ಹೇಳಿದೆ, 'ನನಗೆ ಸ್ಪಷ್ಟವಾಗಿ ಖಚಿತವಾಗಿ ಗೊತ್ತಿರುವುದರ ಬಗ್ಗೆ ಮಾತ್ರ ನಾ ಬರೆಯಬಲ್ಲೆ, ನನ್ನ ಸ್ವಂತ ಅನುಭವಕ್ಕೆ ದಕ್ಕದ್ದನ್ನು ಕುರಿತು ನಾ ಹೇಗೆ ಬರೆಯಲಿ? ಹಾಗೆ ಕೇವಲ ಕಲ್ಪನೆಯಿಂದ ಬರೆದರೆ, ಅದು ದಲಿತರ, ರೈತಕಾರ್ಮಿಕರ ನಿಜವಾದ ನೋವು ನಲಿವು ಸಮಸ್ಯೆಗಳನ್ನು ಹೇಳದೆ, ಕೇವಲ ಬೂಟಾಟಿಕೆಯ ಸಹಾನುಭೂತಿ ಆಗಬಹುದು, ಪೂರ್ವಗ್ರಹದ ಪಕ್ಷಪಾತವಾಗಬಹುದು'. ಚಂದ್ರ ಕೇಳಿದ, 'ನೀವೇಕೆ ಇಂಥ ಕೆಳವರ್ಗದವರೊಂದಿಗೆ ಬೆರೆತು ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬಾರದು?' ನಾನೆಂದೆ, 'ಹಾಗೆ ಪ್ರಯತ್ನಿಸಿದರೂ ನಾನು ಅವರಲ್ಲಿ ಒಬ್ಬ ಹೇಗಾಗಬಲ್ಲೆ? ಹೊರಗಿನವನಾಗಿಯೇ ಉಳಿದು ಅವರನ್ನು ನೋಡಬೇಕಾಗುತ್ತೆ. ಜೊತೆಗೆ ಕೇವಲ ಸಾಹಿತ್ಯದಿಂದ ಯಾವುದೇ ಸಾಮಾಜಿಕ ಕ್ರಾಂತಿ ಸಾಧ್ಯವಾಗಬಹುದೆಂಬ ನಂಬಿಕೆ ನನಗಿಲ್ಲ. ಅದು ಸಾಹಿತ್ಯದ ನಿಜವಾದ ಉದ್ದೇಶವೂ ಅಲ್ಲ. ಕೆಳ ವರ್ಗದ ಜನಕ್ಕೆ ಈಗ ಬೇಕಿರುವುದು ವಿದ್ಯೆ, ತಿಳಿವಳಿಕೆ. ಅವರಲ್ಲಿ ಸ್ವಾಭಿಮಾನ, ಧೈರ್ಯ, ಆತ್ಮವಿಶ್ವಾಸ ಬೆಳೆದಂತೆ, ಸಮಾಜದಲ್ಲಿ ಸಮಾನ ಸ್ಥಾನಮಾನಗಳಿಗಾಗಿ ಅವರೇ ನಿಂತು ಹೋರಾಡುತ್ತಾರೆ. ಇಂಥ